ನ್ಯಾಯಬೆಲೆ ಅಂಗಡಿ ತೆರೆಯಲು ಪರವಾನಗಿ ನೀಡುವ ಬಗ್ಗೆ

೯೮೬ (೧೫೪೪) ಶ್ರೀ ಜಿ. ಎಸ್. ಶಿವಸಂಜಪ್ಪ (ಚಿಬ್ಬಿ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ನಗರ ಮತ್ತು ಗ್ರಾಮಾಂತರ ಪ್ರದೆ ಶದಲ್ಲಿ ಹೊಸದಾಗಿ ನ್ಯಾಯಬೆಲೆ ಅಂಗಡಿ ತೆರೆಯಲು ಪರವಾನಗಿ ನೀಡಲು ಸರ್ಕಾರ ಉದ್ದೇಶಿಸಿದೆಯೇ ?

ಆ) ಇಂತಹ ಪರವಾನಗಿಯನ್ನು ನೀಡುವಾಗ ನಿರುದ್ಯೋಗಿ ಪದವೀಧರರಿಗೆ ಆಧ್ಯತೆ ನೀಡಲು ಸರ್ಕಾರ ಉದ್ದೇಶಿಸಿದೆಯೇ ?

ಇ) ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಕಾನೂನಿನ ತಾರತಮ್ಯವಿದೆಯೆ ?

ಈ) ಇದ್ದಲ್ಲಿ ಜಿಲ್ಲಾ ಪರಿಷತ್ತುಗಳು ಗ್ರಾಮಾಂತರದಲ್ಲಿ ವ್ಯಕ್ತಿಗತವಾಗಿಯೂ ನಗರ ಪ್ರದೇಶಗಳಲ್ಲಿಯೂ ಸಂಘ ಸಂಸ್ಥೆಗಳಿಗೂ ನೀಡುತ್ತಿರುವುದರ ಔಚಿತ್ಯವೇನು ?

ಶ್ರೀ ಅಜೀಜ್‌ಸೇಠ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು),—

ಅ) ಹೌದು.

ಆ) ಮಾರ್ಗದರ್ಶಿನ ಸೂಚಿಗಳಲ್ಲಿ ನಿಗಧಿಪಡಿಸಲಾದ ಆದ್ಯತೆಗಳ ಮೇರೆಗೆ.

ಇ) ಇಲ್ಲ.

ಈ) ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಯಾವುದೇ ತಾರತಮ್ಯವಿಲ್ಲದೆ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಈ ಕೆಳಕಂಡ ಆದ್ಯತೆಗಳನ್ನು ನಿಗಧಿಪಡಿಸಲಾಗಿದೆ.

೧ ಮಾಹಿಳೆಯರು ನಡೆಸುವ ಸಹಕಾರ ಸಂಘಗಳು.

೨ ನೋಂದಾಯಿಸಲ್ಪಟ್ಟ ಪಡಿತರ ಚೀಟಿದಾರರ ಸಂಘ ಸಂಸ್ಥೆಗಳು.

೩ ಮಹಿಳಾ ಮಂಡಳಿ ಮತ್ತು ಯುವಕ ಮಂಡಳಿಗಳು.

೪ ನಿರುದ್ಯೋಗಿ ಪದವೀಧರರು ಹಾಗೂ ಮಾಜಿ ಸೈನಿಕರು.

ಬಾದಾಮಿ ಕೆ.ಎಸ್.ಆರ್.ಟಿ.ಸಿ. ಡಿಪೋದಿಂದ ಹೆಚ್ಚಿನ ಬಸ್ಸು ಓಡಿಸುವ ಬಗ್ಗೆ

೯೮೭ (೧೫೦೦) ಶ್ರೀ ಪುಟ್ಟಣ್ಣ ಶೆಟ್ಟಿ (ಬಾದಾಮಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಬಾದಾಮಿ ಕೆ.ಎಸ್.ಆರ್.ಟಿ.ಸಿ ಡಿಪೋದಲ್ಲಿ ಹೆಚ್ಚಿನ ಬಸ್ಸುಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಆ ಡಿಪ್ಪೋದಲ್ಲಿ ಚಾಲಕರ ಮತ್ತು ನಿರ್ವಾಹಕರ ಅವಶ್ಯಕತೆ ಇರುವ ಸಂಗತಿ ಸಹ ಸರ್ಕಾರದ ಗಮನಕ್ಕೆ ಬಂದಿದೆಯೆ ?

ಇ) ಈ ವರ್ಷ ಎಷ್ಟು ಹೊಸ ರೂಟ್ ಪ್ರಾರಂಭಿಸಲಾಗಿದೆ ಮತ್ತು ಹೊಸ ರೂಟ್ ಎಷ್ಟು ತೆರೆಯಲಾಗುವುದು ?

ಶ್ರೀ ಕೆ.ಜೆ. ಜಾರ್ಜ್ (ಸಾರಿಗೆ ಸಚಿವರು) :

ಅ) ಹೆಚ್ಚಿನ ಬಸ್ಸುಗಳ ಅವಶ್ಯಕತೆ ಇರುವುದಿಲ್ಲ.

ಆ) ಹೌದು, ಬಾದಾಮಿ ಡಿಪೋದಲ್ಲಿ ಮಂಜೂರಾಗಿರುವ ಮತ್ತು ಕಾರ್ಯ ನಿರ್ವಹಿಸುತ್ತಿರುವ ಚಾಲಕ ಮತ್ತು ನಿರ್ವಾಹಕರ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.

ವರ್ಗ	ಮಂಜೂರಾತಿ	ಕಾರ್ಯ ನಿರ್ವಹಿಸುತ್ತಿರುವವರು	ಖಾಲಿ ಹುದ್ದೆಗಳು
ಚಾಲಕರು	೧೧೪	ರೆಗ್ಯುಲರ್ — ೯೪ ಬದಲಿ — ೯	೧೧
ನಿರ್ವಾಹಕರು	೧೧೪	ರೆಗ್ಯುಲರ್ — ೮೮ ಬದಲಿ — ೨೨	೪

ಇ) ೧೯೯೦ನೇ ಏಪ್ರಿಲ್ ತಿಂಗಳಿನಿಂದ ಬಾದಾಮಿ ಘಟಕದ ಮೂಲಕ ೨ ಹೊಸ ಮಾರ್ಗಗಳಲ್ಲಿ ಪ್ರಾರಂಭಿಸಲಾಗಿದೆ. ಆಗತ್ಯವನ್ನಾಧರಿಸಿ ಹೊಸ ಮಾರ್ಗಗಳನ್ನು ಪ್ರಾರಂಭಿಸಲಾಗುವುದು.

ಕ.ರಾ.ರ. ಸಂಸ್ಥೆಯಲ್ಲಿ ಸಹಾಯಕ ಅಭಿಯಂತರರು (ಸಿವಿಲ್) ಹಾಗೂ ಸಹಾಯಕ (ಮೆಕ್ಯಾನಿಕಲ್) ಇಂಜಿನಿಯರ್ ಇವರ ದರ್ಜೆಗಳಲ್ಲಿ ವೇತನ ಶ್ರೇಣಿಯ ತಾರತಮ್ಯ

೯೪೮ (೧೫೪೩) ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ). ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಸಹಾಯಕ ಅಭಿಯಂತರರು (ಸಿವಿಲ್) ಹಾಗೂ ಅಸಿಸ್ಟೆಂಟ್ (ಮೆಕ್ಯಾನಿಕಲ್) ಇಂಜಿನಿಯರ್ ಇವರ ದರ್ಜೆಗಳಲ್ಲಿ ತಾರತಮ್ಯ ಇದೆಯೇ?

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸಹಾಯಕ ಅಭಿಯಂತರರು (ಸಿವಿಲ್) ಮತ್ತು ಕರ್ನಾಟಕ ಲೋಕೋಪಯೋಗಿ ಇಲಾಖೆ ಮತ್ತಿತರ ನಿಗಮಗಳ ಸಹಾಯಕ ಅಭಿಯಂತರರು (ಸಿವಿಲ್) ಇವರ ದರ್ಜೆಗಳಲ್ಲಿ ತಾರತಮ್ಯವಿರುವುದು ನಿಜವೇ?

ಇ) ತಾರತಮ್ಯವಿದ್ದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸಿವಿಲ್ ಮತ್ತು ಮೆಕ್ಯಾನಿಕಲ್ ಸಹಾಯಕ ಅಭಿಯಂತರರ ಹುದ್ದೆಗಳ ಹಾಗೂ ಲೋಕೋಪಯೋಗಿ ಇಲಾಖೆ ಮತ್ತಿತರ ನಿಗಮಗಳಲ್ಲಿ ಕೆಲಸ ಮಾಡುವ ಅಭಿಯಂತರರ ವಿದ್ಯಾರ್ಹತೆ, ನೇಮಕಾತಿ ನಿಯಮ ಹಾಗೂ ಅವರ ಕರ್ತವ್ಯಗಳಲ್ಲಿ ಸಮಾನತೆಯಿದ್ದರೂ ಸಹ ಇವರ ದರ್ಜೆಗಳಲ್ಲಿ ತಾರತಮ್ಯವನ್ನು ಏಕೆ ಇಡಲಾಗಿದೆ?

ಈ) ಮೇಲಿನ ತಾರತಮ್ಯ ನಿವಾರಿಸಲು ಆಡಳಿತ ಮಂಡಳಿಯ ನಿರ್ದೇಶಕರ ಪಟ್ಟಿಯು ಮುಂದೆ ಇಡಲಾಗಿತ್ತೆ, ಇಟ್ಟಿದ್ದರೆ ಮಂಡಳಿಯು ಗೊತ್ತುವಳಿ ಏನು ?

ಉ) ಮೇಲ್ಕಂಡ ತಾರತಮ್ಯವನ್ನು ಸರಿಪಡಿಸಿ ಸಹಾಯಕ ಅಭಿಯಂತರರ (ಸಿವಿಲ್) ಇವರಿಗೆ ಸಮಾನತೆ ಕಲ್ಪಿಸಲು ಯಾವ ಕ್ರಮ ಕೈಗೊಂಡಿದ್ದೀರಿ? ಯಾವಾಗ ಕೈಗೆತ್ತಿಕೊಳ್ಳುತ್ತೀರಿ?

ಶ್ರೀ ಕೆ.ಜೆ. ಜಾರ್ಜ್ (ಸಾರಿಗೆ ಸಚಿವರು).—

ಅ) ಹೌದು.

ಆ) ಹೌದು.

೧) ಅಸಿಸ್ಟೆಂಟ್ ಮೆಕ್ಯಾನಿಕಲ್ ಇಂಜಿನಿಯರ್
೨ನೇ ದರ್ಜೆ—ವೇತನ ಶ್ರೇಣಿ
ರೂ. ೧೧೭೫-೫೦-೧೩೭೫-೬೦-೧೬೭೫-೭೫-೨೦೫೦ (ಇನ್ನೂ ಪರಿಷ್ಕೃತವಾಗಿಲ್ಲ)